

## ಹೇಗೆ ಬಿಟ್ಟು ಹೊರಟೆ?

ಪೆಚ್ಚಾಗಿ ಶಾಲೆಗೆ ಹೋಗುವಾಗ ಚಾಕೊಲೇಟ್ ಕೊಡಿಸಿ, ಕ್ಲಾಸ್‌ರೂಮ್‌ಗೆ ನನ್ನ ಪುಟ್ಟ ಕೈಹಿಡಿದು ತಂದು ಬಿಡುವಾಗ ನನ್ನ ಆಟೊ ಮಾಮ ಅನ್ನುವ ಸಲುಗೆ. ಮಳೆಗೆ ಗುಬ್ಬಿ ತನ್ನ ಮರಿಗಳನ್ನು ತನ್ನ ಪುಕ್ಕದೊಳಗೆ ಬಿಗಿಹಿಡಿಯುವಂತೆ ನೆನೆಯಬಿಡದೆ ನನ್ನ ಮನೆ ತಲುಪಿಸುವ ಮಾಮ. ಟ್ರಾಫಿಕ್ ನಡುವೆ ಹೆಲಿಕಾಪ್ಟರ್ ರೈಡ್‌ನಂತೆ ಸಮಯಕ್ಕೆ ಶಾಲೆಗೆ ತಲುಪಿಸುವ ಹೀರೊ. ನನ್ನ ಕೈತಪ್ಪಿ ಬಿದ್ದು ಒಡೆದ ಲಂಚ್ ಬಾಕ್ಸ್ ಬದಲಾಯಿಸಿ ಹೊಸದು ತಂದು ಬದಲಾಯಿತೆಂದು ಮನೆಗೆ ತಲುಪಿಸಿದ ನನ್ನ ಎರಡನೇ ಅಮ್ಮ.

ಶಾಲೆಗೆ ಬಾಯ್ ಹೇಳುವ ಸಮಯ, ಬೀಳ್ಕೊಡುಗೆ ಸಮಾರಂಭ. ಆಟೊ ಮಾಮನಿಗಾಗಿ ಹಾರ್ಟ್‌ಫೆಲ್ಟ್ ನೋಟ್ ಜೊತೆ ಗುಲಾಬಿ ಹೂವು. ಆಟೊಗ್ರಾಫ್ ಪುಸ್ತಕದ ಕೊನೆಯ ಪುಟ ನಿನಗಾಗಿ.

ಸರಿಯಾದ ಸಮಯಕ್ಕೆ ಬರುವ ಹೀರೊ ಇಂದು ಯಾಕೋ ಲೇಟ್. ಕೊನೆಯ ದಿನ ಅಮ್ಮನ ಡ್ರಾಪ್. ಗುಲಾಬಿ ಹೂವು, ಹಾರ್ಟ್‌ಫೆಲ್ಟ್ ನೋಟ್ ಜೊತೆ ಸ್ಕೂಲ್ ಬಿಡುವ ಹೊತ್ತಿಗೆ ನನ್ನ ಹೀರೊ ದಾರಿ ಕಾಯುತ್ತಿದ್ದೆ. ಅಮ್ಮನ ಸ್ಕೂಟಿ ಹತ್ತುವ ಮೊದಲು ಕೇಳಿದ್ದು, 'ಆಟೊ ಮಾಮ ಎಲ್ಲಿ?' ಎಂದು. ಏನೂ ಮಾತಾಡದೇ ಅಮ್ಮ ಹೊರಟದ್ದು ಆಟೊ ಮಾಮನ ಮನೆಯತ್ತ. ಕೊನೆಯ ವಿದಾಯದ ಕ್ಷಣ, ಹೂವಿನ ಹಾಸಿಗೆಯಲ್ಲಿ ಅದೇ ನಗುವಿನೊಂದಿಗೆ ದೀರ್ಘ ನಿದ್ದೆಗೆ ಜಾರಿದ್ದ. ನನ್ನ ಕೈಯಲ್ಲಿದ್ದ ಗುಲಾಬಿ ಹೂವಿಗೆ ಕಾಯುತ್ತಿದ್ದ ಹಾಗೆ, ಹೊರಡಲು ತಡವಾಗುತ್ತಿದೆ ಅನ್ನುವ ಹಾಗೆ. 'ಹೇಗೆ ಬಿಟ್ಟು ಹೊರಟೆ?'

ಇಂದಿಗೂ ಆಟೊಗ್ರಾಫ್ ಕೊನೆಯ ಪುಟ ನೋಡಿದಾಗ ನೆನಪಾಗುತ್ತದೆ, ನಿನಗೆ ಹೇಳದೆ ಹೋದ ಮಾತು 'ಥ್ಯಾಂಕ್ಯು... ಮಿಸ್ ಯು ಆಟೊ ಮಾಮ'.

—ಜ್ಯೋತಿ ನೊರೋನ್ಹಾ, ಶಿರಸಿ

## ಕಾಡುವ ಅಪರಾಧಿ ಭಾವ

ತುಮಕೂರಿನ ಸಿದ್ಧಗಂಗಾ ಎಲಿಮೆಂಟರಿ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿದ್ದೆ. ಆಗ ಪರಮೇಶ್ವರಪ್ಪ ಎನ್ನುವ ಅಧ್ಯಾಪಕರಿದ್ದರು. ಬಹಳ ಚೆನ್ನಾಗಿ ಕಥೆಗಳನ್ನು ಹೇಳುತ್ತಿದ್ದರು. ಪಾತ್ರಗಳು ಕಣ್ಣ ಮುಂದೆ ಬರುವಂತೆ ಅವರು ಕಥೆಗಳನ್ನು ಹೇಳುತ್ತಿದ್ದ ರೀತಿ ಈಗಲೂ ನೆನಪಿದೆ. ಅವರು ನಮ್ಮ ಶಾಲೆ ಬಿಟ್ಟು ಹೋಗುವ ಸಂದರ್ಭ ಬಂದಾಗ ತುಂಬಾ ಅಳುಬಂದಿತ್ತು. ಆದರೆ ಅವರು ಕಥೆಗಳನ್ನು ಬರೆದು ಕಳಿಸುತ್ತೇನೆ ಎಂದಾಗ ತುಂಬಾ ಖುಷಿಯಾಗಿತ್ತು.

ಪ್ರತೀವಾರ ಒಂದೊಂದು ಕಥೆಯನ್ನು ಪೋಸ್ಟ್ ಕಾರ್ಡಿನಲ್ಲಿ ಬರೆಯುತ್ತಿದ್ದರು. ಸಾಕಷ್ಟು ಕಥೆಗಳನ್ನು ಬರೆದಿದ್ದರು. ನಮಗೆ 7ನೇ ತರಗತಿಯ ಪಬ್ಲಿಕ್ ಪರೀಕ್ಷೆ ಸಮೀಪಿಸುತ್ತಿದ್ದರಿಂದ, 'ಇನ್ನು ಕಥೆಗಳು ಸಾಕು , ಓದುವುದು ಜಾಸ್ತಿಯಿರುತ್ತದೆ ಚೆನ್ನಾಗಿ ಓದು' ಎಂದು ತಿಳಿಸಿ ಕಥೆ ಬರೆದು ಕಳಿಸುವುದನ್ನು ನಿಲ್ಲಿಸಿದರು. ಅವರ ವಿಳಾಸ ಪಡೆಯಬೇಕೆಂಬ ಅರಿವು ನನಗಿರಲಿಲ್ಲ. ಅವರು ಪುನಃ ಸಿಗಲೇ ಇಲ್ಲ. ಅವರಿಗಾಗಿ ನಾನು ಒಂದು ಧನ್ಯವಾದವನ್ನೂ ತಿಳಿಸಲಾಗಿರಲಿಲ್ಲ. ಈಗ ಚಿಕ್ಕ ಚಿಕ್ಕ ವಿಷಯಕ್ಕೂ ಥ್ಯಾಂಕ್ಸ್ ಹೇಳಬೇಕೆಂದು ತಿಳಿಸಿಕೊಡುವ ನಾನು, ಆ ದಿನ ಹೇಳುವುದನ್ನು ಕಲಿತಿರಲಿಲ್ಲ. ಈಗ ನನ್ನ ಮೊಮ್ಮಗಳಿಗೆ ದಿನಾ ಕಥೆ ಹೇಳುವಾಗಲೆಲ್ಲ ಆ ಒಂದು ಅಪರಾಧಿ ಭಾವ ಕಾಡುತ್ತಿದೆ.

—ಶಾಂತ ಗಿರೀಶ್, ಬೆಂಗಳೂರು

## ಮರೀಚಿಕೆಯಾಗಿಯೇ ಉಳಿಯಿತೇ...

ಬಾಲ್ಯದಿಂದಲೂ ನನಗೆ, ಅಕ್ಕ, ತಮ್ಮನಿಗೆ ಅಪ್ಪ ಎಂದರೆ ವಿಶೇಷ ಒಲವು. 'ನಿನ್ನಂಥ ಅಪ್ಪ ಇಲ್ಲ, ಬಾಳಲ್ಲಿ ನೀನೇ ಎಲ್ಲ'– ಅವರ ನೆನಪಲ್ಲಿ ಗುನುಗುವ ಹಾಡು. ಅಪ್ಪ ಅತೀವ ಸ್ನೇಹಮಯಿ ವ್ಯಕ್ತಿ. ಕೆಲವು ವಿಚಾರದಲ್ಲಿ ಮುಂಗೋಪಿ ಅನಿಸಿದರೂ ಮಕ್ಕಳ ವಿಷಯದಲ್ಲಿ ಮಾತ್ರ ಶಾಂತ ಸ್ವಭಾವ. ನಮಗೆ ಅವರು ಕಥೆ ಹೇಳುವ ಬಗೆ ಯಾವುದೋ ಕಲ್ಪನಾಲೋಕಕ್ಕೆ ಕರೆದೊಯ್ದಿತ್ತು. ಅವರ ಮನೋಸ್ಥೈರ್ಯ, ಏನೇ ಆದರೂ ಕುಗ್ಗದ ಸ್ವಭಾವ, ನಮ್ಮನ್ನು ಸಂತೈಸುವ ರೀತಿ ಬಹಳ ಇಷ್ಟವಾಗುತ್ತಿತ್ತು.

ನಮ್ಮ ಆಕಾಂಕ್ಷೆಗಳಿಗೆ ಬೆನ್ನೆಲುಬಾಗಿದ್ದರು. ಆದರೆ ಅವರ ಆರೋಗ್ಯ ದಿಢೀರನೆ ಬಿಗಡಾಯಿಸಿದಾಗ ನಡುನೀರಿನಲ್ಲಿ ಕೈಬಿಟ್ಟಂತೆ ನಮ್ಮನ್ನಗಲಿ ಅನಾಥರನ್ನಾಗಿಸಿದರು. ನಮ್ಮ ಮನೆಯ ಆನಂದಜ್ಯೋತಿ ನಂದಿಹೋಗಿತ್ತು. ಇಷ್ಟು ವರ್ಷಗಳಲ್ಲಿ ಅಪ್ಪನ ಅಗಲಿಕೆಯ ಈ ಕಹಿ ಅನುಭವ ಕೆಟ್ಟ ಕನಸಂತೆ ಕಾಡುವುದುಂಟು. ಅವರಲ್ಲಿ ನಾನು ಹೇಳಿಕೊಳ್ಳಬೇಕಾದ ಸಂಗತಿ ಒಂದೇ ಒಂದು ಎದೆಯೊಳಗೆ ಹಾಗೆ ಉಳಿದಿದೆ...

'ಅಪ್ಪ, ಇನ್ನೇನು ನಮ್ಮ ಕಷ್ಟಗಳೆಲ್ಲಾ ಕೆಲವು ವರ್ಷಗಳಲ್ಲೇ ತೀರಿಬಿಡುತ್ತವೆ ಅನ್ನುವಷ್ಟರಲ್ಲಿ ನೀವೇ ತೀರಿಹೋದಿರಿ, ನಡುನೀರಲ್ಲಿ ಮುಳಗದೆ ಈಜಿ ದಡ ಸೇರಾಯ್ತು, ಈಗ ಒಂದಿಷ್ಟು ಸುಖ ನೆಮ್ಮದಿ ಇದ್ದರೂ ಏನೋ ಖಾಲಿತನ ಕಾಡುತ್ತಿದೆ. ಜೀವನಪೂರ್ತಿ ಕಷ್ಟಗಳನ್ನೇ ಎದುರಿಸಿದ್ದ ನಿಮ್ಮನ್ನು ಸುಖವಾಗಿ ನೋಡಿಕೊಳ್ಳುವ ಆ ಆಸೆ ಮರೀಚಿಕೆಯಾಗೇ ಉಳಿಯಿತು. ಕಾದಿರುವೆವು ನಿಮಗಾಗಿ ಮರಳಿಗೂಡಿಗೆ ಬರುವಿರೇ...?'

—ರಶ್ಮಿ ರಮೇಶ್



## ಬಟವಾಡೆಯಾಗದ ಪ್ರೇಮಪತ್ರ

'ಸೋಲುವುದೇ ಪ್ರೀತಿಯಲ್ಲಿ ಗೆಲುವು' ಎಂಬ ಮಾತಿದೆ. ಪ್ರೇಮಿಗಳ ನಡುವೆ ವಿನಿಮಯವಾಗುವ ಕಣ್ಣ ನೋಟಗಳು, ತುಟಿಯಂಚಿನಲ್ಲಿ ಕಾಣಿಸಿಕೊಳ್ಳುವ ಮುಗುಳುನಗು, ನವಿರಾದ ಭಾವಗಳು ಎದೆಯಲ್ಲಿ ಪ್ರೀತಿಯ ದೀಪ ಹೊತ್ತಿಸುವ ರಾಯಭಾರಿಗಳು. ತಾವು ಇಷ್ಟಪಟ್ಟವರಿಗೆ, ಪ್ರೀತಿಸಿದವರಿಗೆ ತಮ್ಮ ಪ್ರೀತಿಯನ್ನು ನಿವೇದನೆ ಮಾಡಿಕೊಳ್ಳಲು, ತಮ್ಮ ಹೃದಯದ ಪಿಸುಮಾತುಗಳನ್ನು ದಾಟಿಸಲು ಪ್ರೇಮಪತ್ರವೆಂಬ ಮಾಧ್ಯಮ ಎಲ್ಲ ಕಾಲಕ್ಕೂ ಪ್ರಸ್ತುತವೇ. ಆದರೆ ಎಷ್ಟೋ ಬಾರಿ ತಮ್ಮ ಪ್ರೀತಿಯನ್ನು ನಿವೇದಿಸಿಕೊಳ್ಳಲು ಸಾಧ್ಯವಾಗದ ಸಂದರ್ಭಗಳೇ ಹೆಚ್ಚಾಗಿರುತ್ತವೆ. ತಮ್ಮ ಮನದ ಮಾತುಗಳನ್ನು ತೆರೆದಿಡಲು ಪ್ರೇಮಪತ್ರವನ್ನು ಬರೆದಿದ್ದರೂ ಅದನ್ನು ನೀಡಲಾಗದೇ ಹಾಗೆಯೇ ಪ್ರೀತಿಯ ಕನಸೊಂದು ಮನದಲ್ಲೇ ಉಳಿದು ಹೋಗುವುದೂ ಉಂಟು. ನಿಮ್ಮ ಜೀವನದಲ್ಲಿಯೂ ಅಂಥ ಸನ್ನಿವೇಶ ನಡೆದಿದ್ದರೆ, ಬರೆದ ಪ್ರೇಮಪತ್ರವೊಂದು ಬಟವಾಡೆಯಾಗದೆ ಉಳಿದಿದ್ದರೆ, ಆ ಸಂಗತಿಯನ್ನು 'ಸುಧಾ'ದೊಂದಿಗೆ ಹಂಚಿಕೊಳ್ಳಬಹುದು. ಬರಹ 150ರ ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಫೆಬ್ರುವರಿ 15. ಲೇಖನವನ್ನು ನುಡಿ ಅಥವಾ ಯುನಿಕೋಡ್‌ನಲ್ಲಿ editorsu@sudha.co.inಗೆ ಇಮೇಲ್ ಮಾಡಿ.